# **ನಾಲ್ಕನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಜಯಪುರ, ಇವರ ನ್ಯಾಯಾಲಯ**

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 18**
**ಪಿಡಬ್ಲೂಃ 16**

ಸಾಕ್ಷಿದಾರರ ಹೆಸರು **:** ಮಹಮ್ಮದ ಮತೀನ

ತಂದೆಯ ಹೆಸರು **:** ಮಹಮ್ಮದ ಜಿಲಾನಿ

ವಯಸ್ಸು **: 30** ವರ್ಷ

ಉದ್ಯೋಗ **:** ಖಾಸಗಿ ಕೆಲಸ

ವಾಸಸ್ಥಳ **:** ಸಂತೋಷ ನಗರ**,** ಹೈದರಾಬಾದ

- - - - -

**ಇಂದು ದಿನಾಂಕ 01.04.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ**

1) ಒಬ್ಬ ಹಜರಾಬಿ ಎನ್ನುವವರು ನನ್ನ ತಾಯಿ ಇರುತ್ತಾರೆ**.** ತೆಲಂಗಾಣ ರಾಜ್ಯದ ವಿಕಾರಾಬಾದ ಜಿಲ್ಲೆಯಲ್ಲಿ ಮೋಮಿನ ಪೇಟೆಯಲ್ಲಿ ನನ್ನ ತಾಯಿಯ ಹೆಸರಿನಲ್ಲಿ ಯುನಿವರ್ಸಲ್ ಟ್ರೇಡಿಂಗ ಕಂಪನಿ ಎನ್ನುವ ಅಗರಬತ್ತಿ ಫ್ಯಾಕ್ಟರಿ ಇರುತ್ತದೆ**.** ಅದರ ಉಸ್ತುವಾರಿಯನ್ನು ನಮ್ಮ ಮ್ಯಾನೇಜರ ನೋಡಿಕೊಳ್ಳುತ್ತಿದ್ದರು**.** ಅದಕ್ಕಾಗಿ ಶ್ರೀಗಂಧವನ್ನು ಎಲ್ಲಿಂದ ತರಿಸುತ್ತಿದ್ದರು ಎಂದು ಗೊತ್ತಿರುವುದಿಲ್ಲ**.**

**2)** ನನಗೆ ಆರೋಪಿ ನಂ**.6** ಸಾಬಣ್ಣಾ ಗೊತ್ತಿಲ್ಲ**.** ಅವನು ಯಾವ ಕಾಲಕ್ಕೂ ನಮ್ಮ ಫ್ಯಾಕ್ಟರಿಗೆ ಬಂದು ಶ್ರೀಗಂಧದ ತುಂಡುಗಳನ್ನು ಮಾರಿಲ್ಲ**.** ಸನ್ **2024** ರಲ್ಲಿ ಪೋಲೀಸರು **6** ನೇ ಆರೋಪಿಯನ್ನು ಕರೆದುಕೊಂಡು ಬಂದಿದ್ದರು**.** ನಾನು **6** ನೇ ಆರೋಪಿಯನ್ನು ಗುರುತು ಹಿಡಿದಿರುವುದಿಲ್ಲ**.** ನಾನು ಪೋಲೀಸರ ಮುಂದೆ **6** ನೇ ಆರೋಪಿಯು ಶ್ರೀಗಂಧದ ಕಟ್ಟಿಗೆಗಳನ್ನು

ಮಾರಿದ ಬಗ್ಗೆ ಹೇಳಿಕೆ ಕೊಟ್ಟಿರುವುದಿಲ್ಲ. ನಮ್ಮ ಕಂಪನಿಯ ಫ್ಯಾಕ್ಟರಿ ಲೈಸೆನ್ಸ ನೋಡುತ್ತಿದ್ದು, ಅದನ್ನು ಈಗ ನಿ.ಪಿ.**28** ಎಂದು ಗುರುತಿಸಲಾಯಿತು.

**3)** ಕೊಲ್ಹಾರ ಪೋಲೀಸರು ನಮ್ಮ ಕಂಪನಿಗೆ ಬಂದಾಗ ಅಲ್ಲಿ ನಮ್ಮ ರಾಜ್ಯದ ಅರಣ್ಯಾಧಿಕಾರಿಗಳು ಹಾಜರಿದ್ದರು. ಅವರು ನಮ್ಮ ಫ್ಯಾಕ್ಟರಿ ಪರಿಶೀಲಿಸಿ, ಯಾವುದೇ ಕಾನೂನುಬಾಹಿರ ಕೆಲಸ ಆಗಿಲ್ಲವೆಂದು ಹೇಳಿರುತ್ತಾರೆ. ನಾನು ಪೋಲೀಸರಿಗೆ **6** ನೇ ಆರೋಪಿ ಗೊತ್ತಿಲ್ಲ ಮತ್ತು ನಮ್ಮ ಫ್ಯಾಕ್ಟರಿ ಕಾನೂನುಬದ್ದವಾಗಿ ನಡೆಯುತ್ತಿದೆ ಎಂದು ಹೇಳಿರುತ್ತೇನೆ.

**(**ಈ ಹಂತದಲ್ಲಿ ಸಾಕ್ಷಿಯು ಹೇಳಿಕೆಗಳಿಗೆ ವಿರುದ್ದವಾಗಿ ಸಾಕ್ಷ್ಯವನ್ನು ಕೊಡುತ್ತಿರುವ ಕಾರಣ, ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಮಾನ್ಯ ಪಿಪಿಯವರು ಅನುಮತಿ ಕೋರಿರುತ್ತಾರೆ. ವಾದ ಕೇಳಿ, ಹೇಳಿಕೆ ಪರಿಶೀಲಿಸಿ ಅನುಮತಿ ನೀಡಲಾಯಿತು**).**

**<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರಿಂದಃ</u>**

**4)** ದಿನಾಂಕ **12.09.2024** ರಂದು ಪೋಲೀಸರು **6** ನೇ ಆರೋಪಿಯನ್ನು ಕರೆದುಕೊಂಡು ನಮ್ಮ ಕಂಪನಿಗೆ ಬಂದಿದ್ದು, ನಾನು ಆತನನ್ನು ಗುರುತಿಸಿ, **2-3** ವರ್ಷಗಳಿಂದ **6** ನೇ ಆರೋಪಿಯು ನಮ್ಮ ಕಂಪನಿಗೆ ಶ್ರೀಗಂಧದ ತುಂಡುಗಳನ್ನು ಮಾರುತ್ತಿದ್ದ ಮತ್ತು ಸದರಿ ತುಂಡುಗಳು ತನ್ನ ಜಮೀನಿನಲ್ಲಿ ಕಾನೂನುಬದ್ದವಾಗಿ ಬೆಳೆದ ಶ್ರೀಗಂಧದ

**ಎಸ್.ಸಿ.ನಂಃ 128/2025**
**ಸಿಡಬ್ಲೂಃ 18**
ಪಿಡಬ್ಲೂಃ **16**

ಗಿಡದ ತುಂಡುಗಳು ಎಂದು ಹೇಳುತ್ತಿದ್ದ ಎಂದು ಹೇಳಿರುತ್ತೇನೆ ಎಂದರೆ ಸರಿಯಲ್ಲ.

**5)** ಆರೋಪಿ ನಂ.**6** ಸೆಪ್ಟೆಂಬರ-ಅಕ್ಟೋಬರ-**2024** ರಲ್ಲಿ ನಮ್ಮ ಕಂಪನಿಗೆ ಸುಮಾರು **60-62** ಕೆ.ಜಿ. ಯಷ್ಟು ಶ್ರೀಗಂಧದ ತುಂಡುಗಳನ್ನು ಮಾರಾಟ ಮಾಡಿದ್ದ, ಮತ್ತು ಅವುಗಳನ್ನು **01** ಕೆ.ಜಿ.ಗೆ ರೂ.**4000/-**ರಂತೆ ಹಣ ಕೊಟ್ಟು ಖರೀದಿ ಮಾಡಿರುತ್ತೇವೆ, ಮತ್ತು ಅವುಗಳಿಂದ ನಮ್ಮ ಕಂಪನಿಯಲ್ಲಿ ಅಗರಬತ್ತಿಗಳನ್ನು ತಯಾರಿಸಿ ಅವುಗಳನ್ನು ಮಾರಾಟ ಮಾಡಿದ ವಿಷಯ ಪೋಲೀಸರಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ಅದರಂತೆ ಈಗ ಓದಿ ಹೇಳಿದಂತೆ ನಿ.ಪಿ.**29** ರಂತೆ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

**6)** ನಾನು **6** ನೇ ಆರೋಪಿಯಿಂದ ಶ್ರೀಗಂಧದ ತುಂಡುಗಳನ್ನು ಖರೀದಿಸಿದ್ದರೂ ಕೂಡ ಮತ್ತು ಪೋಲೀಸರ ಮುಂದೆ ನಿ.ಪಿ.**29** ರಂತೆ ಹೇಳಿಕೆಯನ್ನು ಕೊಟ್ಟಿದ್ದರೂ ಸಹಿತ, ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ ಆರೋಪಿತರ ಪರವಾಗಿಃ</u>**

ಏನೂ ಇರುವುದಿಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)
ಓ.ಹೇ.ಕೇ. ಸರಿ ಅದೆ.

4 ನೆಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು, ವಿಜಯಪುರ.